**ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.**

---

**ಅಸಲು ದಾವಾ ನಂ ಃ 338/2019 ದಿನಾಂಕ ಃ 29-08-2023**
**ಪಿ.ಡಬ್ಲ್ಯೂ ಃ 1**

---

**ಃಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತುಃ**

***********

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಬಿ ರವರಿಂದಃ-**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮದುವೆ ಗೋಪಾಲ ಗೌಡರ ಜೊತೆ 1975 ನೇ ಇಸವಿಯಲ್ಲಿ ಆಗಿರುತ್ತದೆ. ಈ ದಾವೆಯನ್ನು ನಾನು ತಾರನಾಥ್ ಒಬ್ಬರ ವಿರುದ್ಧ ಮಾತ್ರ ದಾಖಲು ಮಾಡಿರುತ್ತೇನೆ. ದಾವೆಯನ್ನು ಮಲಸಾವರ ಗ್ರಾಮದ ಸರ್ವೆ ನಂ. 190 ವಿಸ್ತೀರ್ಣ 20 ಎಕರೆಗೆ ಸಂಬಂಧಿಸಿದಂತೆ ದಾಖಲು ಮಾಡಿರುತ್ತೇನೆ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿದ್ದು ಸದರಿ ಆಸ್ತಿ ನನಗೆ ಸೇರಿದ್ದು ಎಂದು ದಾಖಲಿಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿ ದಕ್ಷಿಣಕ್ಕೆ ದಿಕ್ಕಿಗೆ ಸರ್ಕಾರಿ ರಸ್ತೆ, ಪೂರ್ವಕ್ಕೆ ರವಿಕುಮಾರ್ ರವರ ತೋಟ, ಪಶ್ಚಿಮಕ್ಕೆ ತಾರನಾಥ್ ರವರ ತೋಟ, ಉತ್ತರಕ್ಕೆ ರಾಜು ರವರ ತೋಟ. ಈಗ ನಾನು ಹೇಳಿದ ಚೆಕ್ಕಬಂದಿಯನ್ನು ವಾದ ಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಆಸ್ತಿ ಮೂಲತಃ ನನ್ನ ಮಾವ ಮಂಜೇಗೌಡ ರವರ ತಂದೆ ಜೂಲೇಗೌಡರವರಿಗೆ ಸೇರಿದ್ದು. ಜೂಲೇಗೌಡರಿಗೆ ದಾವಾ ಆಸ್ತಿ ಹೊರತು ಪಡಿಸಿ ಬೇರೆ ಬೇರೆ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಜೂಲೇಗೌಡರಿಗೆ 4 ಜನ ಗಂಡು ಮಕ್ಕಳು ಅವರ ಹೆಸರು ಸಿದ್ದೇಗೌಡ, ಮಂಜೇಗೌಡ, ಕರೀಗೌಡ, ತಮ್ಮಣ್ಣಗೌಡ. ದಿಃ18-05-1973 ರಂದು ಜೂಲೇಗೌಡರಿಗೆ ಸೇರಿದ ಆಸ್ತಿಗಳನ್ನು ಅವರ ಮಕ್ಕಳು ಪಾಲುಪಾರಿಕತ್ತು ಮುಖಾಂತರ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡ ವಿಚಾರ ತಿಳಿದಿರುತ್ತದೆ ಆದರೆ ದಿನಾಂಕ ಮತ್ತು ಉಳಿದ ಮಾಹಿತಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರ ನೊಂದವಣೆ ಆಗಿತ್ತು.

**2.** ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ದಿಃ18-05-1973 ರಂದು ಆದ ಪಾಲುಪಟ್ಟಿಯಲ್ಲಿ ರವಿಕುಮಾರ್, ತಾರನಾಥ್ ಮತ್ತು ಗೋಪಾಲ ಗೌಡರ ತಮ್ಮ ತಾರಾಶಂಕರ್ ರವರ ನಡುವೆ ಹಿಸ್ಸೆ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ಸ್ವತಃ ಓದಿ ತಿಳಿದುಕೊಂಡಿರುತ್ತೇನೆ. ಪಾಲುಪಟ್ಟಿ ಆದ ಸಮಯದಲ್ಲಿ ನನಗೆ ಗೋಪಾಲಗೌಡರೊಂದಿಗೆ ಮದುವೆಯಾಗಿತ್ತು ಮತ್ತು ನನಗೆ ಪಾಲುಪಟ್ಟಿ ಬಗ್ಗೆ ತಿಳಿದಿತ್ತು. ಸದರಿ ಪಾಲುಪಟ್ಟಿಯಲ್ಲಿ ಯಾರು ಯಾರಿಗೆ ಯಾವ ಆಸ್ತಿ ಮತ್ತು ಎಷ್ಟು ಎಕರೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪಾಲುಪಟ್ಟಿಯಲ್ಲಿ ನನ್ನ ಗಂಡನ ಪಾಲಿಗೆ ಈ ದಾವಾ ಆಸ್ತಿ ಬಂದಿರುತ್ತದೆ. ಸದರಿ ನನ್ನ ಗಂಡನ ಪಾಲಿಗೆ ಬಂದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಆಗಿದ್ದು ಪಹಣಿ ಪತ್ರಿಕೆಯಲ್ಲಿ ನನ್ನ ಗಂಡನ ಹೆಸರು ದಾಖಲಾಗಿರುತ್ತದೆ. ಸದರಿ ದಾಖಲಾತಿಗಳನ್ನು ನಾನು ಹಾಜರು ಮಾಡಿರುತ್ತೇನೆ.

**3.** ನನ್ನ ಗಂಡ ಮರಣ ಹೊಂದಿ 9 ವರ್ಷಗಳಾಗಿರುತ್ತದೆ. ಅವರ ಮರಣಾ ನಂತರ ದಾವಾ ಆಸ್ತಿಯ ಖಾತೆ ಬದಲಾಗಿ ಪಹಣಿ ನನ್ನ ಹೆಸರಿನಲ್ಲಿ ದಾಖಲಿರುತ್ತದೆ. ನಾನು ಕಂದಾಯವನ್ನು ಪಾವತಿ ಮಾಡಿರುತ್ತೇನೆ. ಖಾತೆ ಬದಲಾಗಿ ದಾವಾ ಆಸ್ತಿಯ ಪಹಣಿ ನನ್ನ ಹೆಸರಿಗೆ ದಾಖಲಾಗಿ ಅದಕ್ಕೆ ಸಂಬಂಧಿಸಿದಂತೆ ನಾನು ಪಾವತಿ ಮಾಡಿದ ಕಂದಾಯ ರಶೀದಿ ಮತ್ತು ಎಲ್ಲಾ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನನ್ನ ಹೆಸರಿಗೆ ಖಾತೆ ಆಗಿರುವುದಿಲ್ಲ ಮತ್ತು ನಾನು ಯಾವುದೇ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ18-05-1973 ರಂದು ಆದ ಪಾಲುಪಟ್ಟಿಯಲ್ಲಿ ಜೂಲೇಗೌಡರ ಮಕ್ಕಳು ಆಸ್ತಿಯನ್ನು ವಿಭಾಗ ಮಾಡಿಕೊಳ್ಳುವ ಉದ್ದೇಶದಿಂದ ಸದರಿ ವಿಭಾಗ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿ. ನನಗೆ ಸುಬ್ಬೆಗೌಡರ ಪರಿಚಯ ಇರುತ್ತದೆ. ಸುಬ್ಬೆಗೌಡರು ಒಂದು ಮರಣಶಾಸನವನ್ನು ಬರೆದಿರುತ್ತಾರೆ. ಯಾವಾಗ ಬರೆದಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರು ಮರಣಶಾಸನವನ್ನು ನನ್ನ ಗಂಡ ಗೋಪಾಲಗೌಡರ ಹೆಸರಿಗೆ ದಾವಾ ಆಸ್ತಿಯನ್ನು ಬರೆದಿರುತ್ತಾರೆ. ಮರಣ ಶಾಸನ ಬರೆದ ಸುಬ್ಬೆಗೌಡರಿಗೆ ದಾವಾ ಆಸ್ತಿ ಸೇರಿತ್ತು. ಸದರಿ ಸುಬ್ಬೆಗೌಡರಿಗೆ ಆಸ್ತಿಯು ನನ್ನ ಮಾವ ಮಂಜೇಗೌಡರಿಂದ ಬಂದಿರುತ್ತದೆ. ಸಾಕ್ಷಿಯು ಪುನಃ ಸದರಿ ಸುಬ್ಬೆಗೌಡರೆ ತನ್ನ ಮಾವ ಮಂಜೇಗೌಡರಿಗೆ ತನ್ನ ಪಾಲಿನ ಆಸ್ತಿಯನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸುಬ್ಬೇಗೌಡರಿಗೆ ಸದರಿ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ದಾಖಲಿಸುವ ಪೂರ್ವದಲ್ಲಿ ದಾವಾ ಆಸ್ತಿ ಸುಬ್ಬೆಗೌಡರಿಗೆ ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

**4.** ಸುಬ್ಬೆಗೌಡರು ಬರೆದಿರುವ ಮರಣ ಶಾಸನವನ್ನು ನಾನು ನೋಡಿರುತ್ತೇನೆ ಅದು ನನ್ನ ಬಳಿ ಇರುತ್ತದೆ. ಸಾಕ್ಷಿಯು ಪುನಃ ಸದರಿ ಮರಣ ಶಾಸನವನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಜರು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಅದನ್ನು ವಾಪಸ್ಸು ಪಡೆದು ಹಾಜರು ಮಾಡುತ್ತೇವೆ. ಸದರಿ ಮರಣ ಶಾಸನವನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ತಾನು ಯಾರನ್ನು ಕೇಳಬೇಕೆಂದು ತಿಳಿದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಪ್ರಕಾರ ದಾವಾ ಆಸ್ತಿ ಮಂಜೇಗೌಡರಿಂದ ಗೋಪಾಲಗೌಡರಿಗೆ ಬಂದಿರುತ್ತದೆ. ಮಂಜೇಗೌಡರಿಗೆ ದಾವಾ ಆಸ್ತಿ ಅವರ ತಂದೆ ಜೂಲೇಗೌಡರಿಂದ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ವಿಭಾಗ 1973 ರಲ್ಲಿ ಆಗಿದ್ದು ಅದರ ಪ್ರಕಾರ ಬಂದಿರುತ್ತದೆ. ಸದರಿ ವಿಭಾಗದಲ್ಲಿ ಮಂಜೇಗೌಡರಿಗೆ ದಾವಾ ಅಸ್ತಿಯಾದ 20 ಎಕರೆ ಮಾತ್ರ ಬಂದಿರುತ್ತದೆ. ಸದರಿ 1973 ರಲ್ಲಿ ಆದ ವಿಭಾಗ ಪತ್ರದ ಬಗ್ಗೆ ಯಾರಿಗು ಅಸಮಾಧಾನ ಇರಲಿಲ್ಲ ಎಲ್ಲಾರು ಸಹಿ ಹಾಕಿದ್ದರು. ಸಾಕ್ಷಿಯು ಮುಂದುವರಿದು ನಂತರ ಇನ್ನೊಂದು ಪಂಚಾಯಿತಿ ಮಾಡಿ ದಾವಾ ಆಸ್ತಿಯನ್ನು ಗೋಪಾಲಗೌಡರ ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪಂಚಾಯಿತಿ 1984 ರಲ್ಲಿ ಆಗಿದ್ದು ನಿಖರ ದಿನಾಂಕ ಗೊತ್ತಿಲ್ಲ. ಸದರಿ ವಿಭಾಗವನ್ನು 1973 ರಲ್ಲಿ ಆದ ವಿಭಾಗದಂತೆ ಬರವಣಿಗೆಯಲ್ಲಿ ಆಗಿರುತ್ತದೆ. ಸದರಿ ವಿಭಾಗ ನೊಂದವಣಿಯಾಗಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರವನ್ನು ಪಂಚಾಯಿತಿದಾರರು ಯಾರಿಗಾದರು ಕೊಟ್ಟರೆ ಸಿಟ್ಟಾಗಬಹುದು ಎಂದು ತಮ್ಮ ಬಳಿ ಇಟ್ಟುಕೊಂಡಿದ್ದರು. ಸದರಿ ವಿಭಾಗ ಪತ್ರ ದ್ಯಾವೇಗೌಡರ ಬಳಿ ಉಳಿದಿದ್ದು ಅವರು ಈಗ ಮರಣ ಹೊಂದಿರುತ್ತಾರೆ. ಈಗ ಸದರಿ ಪತ್ರ ಯಾರ ಬಳಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**5.** ಸದರಿ 1984 ರ ಪಂಚಾಯಿತಿಯಲ್ಲಿ ದಾವಾ ಆಸ್ತಿಯನ್ನು ನನ್ನ ಗಂಡ ಗೋಪಾಲಗೌಡರಿಗೆ ಬಂದಿರುತ್ತದೆ. ಸದರಿ ಪಂಚಾಯಿತಿಯಲ್ಲಿ ತಮ್ಮಣ್ಣಗೌಡರು ಸಹ ಹಾಜರಿದ್ದರು. ಸದರಿ ತಮ್ಮಣ್ಣಗೌಡರಿಗೆ ಯಾವ ಆಸ್ತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಎಲ್ಲಾ ವಿಷಯಗಳನ್ನು ಬರೆಸಿರುತ್ತೀರಾ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ 2 ನೇ ಪ್ರತಿವಾದಿ ನನ್ನ ಗಂಡ ಗೋಪಾಲಗೌಡರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ದಾಖಲಿಸಿದ್ದರು. ಸದರಿ ದಾವೆಯನ್ನು ಯಾವ ಇಸವಿಯಲ್ಲಿ ಹಾಕಿದ್ದರು ಎಂದು ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿದ್ದರು. ಸದರಿ ದಾವೆಯನ್ನು 2 ನೇ ಪ್ರತಿವಾದಿ ಈ ದಾವೆಯ ದಾವಾ ಆಸ್ತಿ ತನಗೆ ಸೇರಿದ್ದು ಎಂದು ದಾಖಲಿಸಿದ್ದರು. ಸದರಿ ದಾವೆ ಚಾಲ್ತಿಯಲ್ಲಿರುವಾಗ ನನ್ನ ಗಂಡ ಮರಣ ಹೊಂದಿದ್ದ ಕಾರಣ ದಾವೆ ಮುಕ್ತಾಯವಾಗಿರುತ್ತದೆ.

**6.** ನನಗೆ ಬಸವರಾಜು ರವರ ಮಗ ತ್ಯಾಗರಾಜ್ ರವರ ಪರಿಚಯ ಇರುವುದಿಲ್ಲ. ನಮ್ಮ ಮತ್ತು ಅವರ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ. ನಾವು ಆಸ್ತಿಯನ್ನು ಮಾರಾಟ ಮಾಡುವ ಸಲುವಾಗಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ದಾವಾ ಆಸ್ತಿ ಮಾರಾಟ ಮಾಡುವುದಾಗಿ ಅವರಿಂದ ಯಾವುದೇ ಹಣ ಪಡೆದಿರುವುದಿಲ್ಲ. ಸಾಕ್ಷಿಗೆ ಈಗ ದಿಃ25-04-2019 ರ ಕ್ರಯದ ಕರಾರು ಪತ್ರ ಹಾಗೂ 30-07-2021 ರ ಕ್ರಯದ ಕರಾರಿನ ಪೂರಕ ಪತ್ರದ ದಾಖಲೆಗಳಿಗೆ ತನ್ನ ಸಹಿ ಮತ್ತು ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರೆಣೆಯ ಪ್ರಮಾಣಪತ್ರದಲ್ಲಿ ತ್ಯಾಗರಾಜು ರವರಿಗೆ ವ್ಯವಹಾರ ಮಾಡಿ ಕ್ರಯದ ಕರಾರು ಪತ್ರದ ಬಗ್ಗೆ ಬರೆಸಿರುತೀರಾ ಎಂದರೆ ಸಾಕ್ಷಿಯು ತಾನು ಜಮೀನಿನ ಅಭೀವೃದ್ದಿಗಾಗಿ ಸಾಲ ಮಾಡಿದ ಬಗ್ಗೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದು ಬರೆಸಿರುತ್ತೇನೆ. ನಿಡಿ-1 ಮತ್ತು 2 ಸದರಿ ವ್ಯವಹಾರಕ್ಕೆ ಸಂಬಂಧಿಸಿದ ಪತ್ರಗಳು ಎಂದರೆ ಸರಿ. ನಿಡಿ-1 ರ ಕರಾರು ಪತ್ರವನ್ನು ಈ ದಾವೆಯ ದಾವಾ ಆಸ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುತ್ತೇನೆ. ನಿಡಿ-1 ಮತ್ತು 2 ಕ್ಕೆ ಓದಿ ಸಹಿ ಮಾಡಿರುತ್ತೇನೆ. ನಿಡಿ-1 ಮತ್ತು 2 ರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ. ಬೇಲೂರು ತಾಲೂಕಿನ ಶಿರಗುರ ಗ್ರಾಮದ ಸರ್ವೆ ನಂ. 93 ರಲ್ಲಿ 20 ಎಕರೆ ಕಾಫಿ ತೋಟದ ಆಸ್ತಿ ನಿಮಗೆ ಸೇರಿತ್ತೋ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ. ನಾನು ತ್ಯಾಗರಾಜುರವರ ಜೊತೆ ಆದ ವ್ಯವಹಾರ ಸರ್ವೆ ನಂ. 93 20 ಎಕರೆ ಆಸ್ತಿಗೆ ಸಂಬಂಧಿಸಿದ್ದು ಆದರೆ ದಾವಾ ಆಸ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ತ್ಯಾಗರಾಜು ರವರ ಜೊತೆ ನಿಡಿ-1 ಮತ್ತು 2 ರ ಪತ್ರದಂತೆ ವ್ಯವಹಾರ ಹೊರತು ಪಡಿಸಿ ಬೇರೆ ವ್ಯವಹಾರ ಮಾಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮುಂದಿನ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ಬೇಲೂರು.

PW-1 Present. She is Cross examined by Sri. CB Advocate for Defendant No.1 and 2. Ex.D-1 and 2 marked through PW-1.

Sri. Ramesh Advocate for Plaintiff files IA-5 U/o 26 Rule 4 and 9 of CPC to examine the witnessess furnished in the list.

For Objections to IA-5 and F/Cross examination of PW-1 by 13-09-2023

**CJ and JMFC, Belur**